**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು**
**ಹುಕ್ಕೇರಿ**

CC No. 504 /2025
PW-2

ಹೆಸರು : ವಿಜಯ ನಿಂಗಪ್ಪ ಆಕಳೆ
ವಯಸ್ಸು : 32 ವರ್ಷ
ಉದ್ಯೋಗ : ವ್ಯವಸಾಯ
ವಾಸಸ್ಥಳ : ಬ್ರಮ್ಹಲಿಂಗೇಶ್ವರ ಗುಡಿ

(ದಿನಾಂಕ 05-05-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಬಿ ಎಂ ಜೆ ವಕೀಲರಿಂದ -**

**ಪ್ರಶ್ನೆ:** ನಿಮ್ಮ ಶಿಕ್ಷಣ ಎಷ್ಟಾಗಿದೆ?

**ಉತ್ತರ:** ಬಿ.ಕಾಂ ಆಗಿದೆ.

ಪ್ರಶ್ನೆ: ನಿಮಗೆ ಈ ಕೇಸ್ ಬಗ್ಗೆ ಸಂಪೂರ್ಣ ಮಾಹಿತಿ ಇದೆಯೇ?

ಉತ್ತರ: ಹೌದು, ಮಾಹಿತಿ ಇದೆ.

ಪ್ರಶ್ನೆ: ನೀವು ಮತ್ತು ಈ ಬಂಗಾರಪ್ಪ ಯಾವ ರೀತಿಯಿಂದ ಪರಿಚಯಸ್ಥರು?

ಉತ್ತರ: ನಮ್ದು 2017 ರಿಂದ ಅರ್ಜುನ ಕುಸುಮ ಮಷೀನ್ ಇದೆ, ಅಲ್ಲಿ ನಾವು ಮಾಡಲ್ ಅಗೆ ಹೋಗ್ತಿದ್ವಿ. ಅರ್ಜುನ ಕುಸುಮ ಮತ್ತು ಕಬ್ಬು ಕಡಿಯೋಕೆ ಕಂಟಿನ್ಯೂ ಅವರದ್ದೇ ಹೋಗ್ತಿದ್ವಿ, ಆ ರೀತಿ ಪರಿಚಯ ನಮಗೆ.

ಪ್ರಶ್ನೆ: ನೀವು ಈ ಕೇಸ್‌ನಲ್ಲಿ ಏನು ಸಾಕ್ಷಿದಾರ ಅಂತ ಸಹಿ ಮಾಡಿದ್ದೀರಿ, ನಿಮ್ಮ ಜೊತೆಗೆ ಇನ್ನೊಬ್ಬರು ಯಾರಿದ್ದರು?

ಉತ್ತರ: ಅವರ ಕೊಬ್ಬುರದ ಶಂಕರ್ ಟರ್ಕಿ ಅವರು.

ಪ್ರಶ್ನೆ: ಶಂಕರ್ ಕರ್ಕಿ ಅವರು ಮತ್ತು ನಿಮಗೂ ಏನಾದರೂ ಪರಿಚಯ ಇದೆಯೇ?
ಉತ್ತರ: ಇಲ್ಲ, ಈ ವ್ಯವಹಾರದಿಂದಲೇ ಪರಿಚಯ.

ಪ್ರಶ್ನೆ: ಶಂಕರ್ ಕೆ ಟರ್ಕಿ ಅವರು ಕೊಬ್ಬುರದಲ್ಲಿ ಒಂದು ರೈತ ಪಿ.ಕೆ.ಪಿ.ಎಸ್ ಎಂಬ ಸೊಸೈಟಿಯ ಡೈರೆಕ್ಟರ್ ಆಗಿ ಕೆಲಸ ಮಾಡ್ತಾರೆ, ಅಲ್ಲಿ ಎಲ್ಲಾ ತರಹದ ಲೋನ್ ಮತ್ತು ಸಾಲ ಕೊಡೋ ಕೆಲಸ ಮಾಡ್ತಾರೆ ಎಂಬ ಮಾಹಿತಿ ಇದೆಯೇ?

ಉತ್ತರ: ಇಲ್ಲ, ನಮಗೆ ಅದರ ಮಾಹಿತಿ ಇಲ್ಲ ಸರ್.

ಪ್ರಶ್ನೆ: ಈ ಆರೋಪಿಯ ಪರಿಚಯ ಮೊದಲಿನಿಂದ ಇರಲಿಲ್ಲವೇ?

ಉತ್ತರ: ನಾವು ಅಲ್ಲಿ ಕಬ್ಬು ಕಡಿಯೋಕೆ ಹೋಗ್ತಿದ್ವಿ, ಆವಾಗ ಅವರು ಮತ್ತು ಬಂಗಾರಪ್ಪ ಇಬ್ಬರೂ ಜೊತೆಯಲ್ಲೇ ಇರ್ತಿದ್ರು. ಅವರು ನಮಗೆ ಮಾತಾಡ್ಸಿದ್ರು, ಅಷ್ಟೇ ಪರಿಚಯ.

ಪ್ರಶ್ನೆ: ಈ ಕೇಸ್ ಯಾವುದರ ಬಗ್ಗೆ ಇದೆ ಎಂಬ ಮಾಹಿತಿ ಇದೆಯೇ?

ಉತ್ತರ: ಇದೆ ಸರ್, ಸುಭಾಷ್ ಚಿಕ್ಕೋಡಿ ಅವರು ಬಂಗಾರಪ್ಪನವರ ಮನೆಗೆ ದುಡ್ಡು ತಗೊಳ್ಳೋಕೆ ಬಂದಿದ್ದರು. ಆವಾಗ ಟರ್ಕಿ ಅವರು ನಮ್ಮನ್ನು ಕರೆಸಿ ವ್ಯವಹಾರ ಮಾಡಿಸಿ ರೊಕ್ಕ ಕೊಡಿಸಿದ್ದರು, ಫಸ್ಟ್ ಟೈಮ್ 4 ಲಕ್ಷ ರೂಪಾಯಿ.

ಪ್ರಶ್ನೆ: ಯಾವ ಚೆಕ್ ಕೊಟ್ಟಿದ್ದಾರೆ ಎಂಬ ಬಗ್ಗೆ ಮಾಹಿತಿ ಇದೆಯೇ?

ಉತ್ತರ: ಚೆಕ್ ಬಗ್ಗೆ ಮಾಹಿತಿ ಇಲ್ಲ ಸರ್.

ಪ್ರಶ್ನೆ: ಎಷ್ಟು ಅಮೌಂಟ್ ಮತ್ತು ಯಾವ ಬ್ಯಾಂಕ್‌ನಲ್ಲಿ ಕಲೆಕ್ಷನ್ ಆಗಿದೆ ಎಂಬ ಮಾಹಿತಿ ಇದೆಯೇ?

ಉತ್ತರ: ಚೆಕ್ ಕೊಟ್ಟಿದ್ದಾರೆ, ದುಡ್ಡು ಆಮೇಲೆ ಕೊಡ್ತೀನಿ ತಗೋರಿ ಅಂತ ಮಾತಾಡಿಕೊಂಡಿದ್ದರು. ಆದರೆ ಯಾವ ಬ್ಯಾಂಕ್ ಅಂತ ಗೊತ್ತಿಲ್ಲ. ದುಡ್ಡು ಕೊಡ್ತೀನಿ ಅಂತ ಹೇಳಿದ್ರು, ಚಿಕ್ಕೋಡಿಗೆ ಹೋಗಿ ಬಾಂಡ್ ಕೂಡ ಮಾಡಿದ್ದೀವಿ. ಮೂರು ತಿಂಗಳ ನಂತರ ಕೊಡ್ತೀನಿ ಅಂದಿದ್ರು, ಆದ್ರೆ ಕೊಡಲಿಲ್ಲ. ಆಮೇಲೆ ಚೆಕ್ ಹಾಕಿದ್ದೀನಿ ಅಂತ ಅವರು ಹೇಳಿದ್ರು ಅಷ್ಟೇ.

ಪ್ರಶ್ನೆ: ಆ ಅಮೌಂಟ್ ಅನ್ನು ಬಂಗಾರಪ್ಪ ಯಾವ ದಿನಾಂಕದಂದು ಕೇಳಿದ್ದ ಎಂಬ ಬಗ್ಗೆ ಮಾಹಿತಿ ಇದೆಯೇ?

ಉತ್ತರ: ನಮಗೆ ಗೊತ್ತಿಲ್ಲ ಸರ್.

ಪ್ರಶ್ನೆ: ಯಾವ ಯಾವ ತಾರೀಖಿನಿಂದ ಅಮೌಂಟ್ ಕೊಟ್ಟಿದ್ದ ಎಂಬ ಮಾಹಿತಿ ಮುಖ್ಯ ವಿಚಾರಣೆಯಲ್ಲಿ ಕೊಟ್ಟಿದ್ದೀರಾ?

ಉತ್ತರ: ಫೆಬ್ರವರಿ 20, 2023 ರಂದು ಬಾಂಡ್ ಮಾಡುವಾಗ ಇದ್ದೆವು ಅಷ್ಟೇ, ಬೇರೆ ಮಾಹಿತಿ ನನಗಿಲ್ಲ.

ಪ್ರಶ್ನೆ: ಯಾವ ಬ್ಯಾಂಕ್‌ನಲ್ಲಿ ಚೆಕ್ ಕಲೆಕ್ಷನ್ ಆಗಿದೆ, ದುಡ್ಡು ಯಾರು ತಗೊಂಡಿದ್ದಾರೆ ಎಂಬ ಮಾಹಿತಿ ಇದೆಯೇ?

ಉತ್ತರ: ದುಡ್ಡು ಕೈಯಲ್ಲೇ ಕೊಟ್ಟಿದ್ದರು, ಆಮೇಲೆ ಚೆಕ್ ಕೊಟ್ಟಿದ್ದರು. ಯಾವ ಬ್ಯಾಂಕ್ ಅಂತ ಗೊತ್ತಿಲ್ಲ.

ಪ್ರಶ್ನೆ: ಒಟ್ಟು ಎಷ್ಟು ಅಮೌಂಟ್ ಬಗ್ಗೆ ಈ ಪ್ರಕರಣ ನಡೆಯುತ್ತಿದೆ?

ಉತ್ತರ: 10 ಲಕ್ಷದ 55 ಸಾವಿರ.

ಪ್ರಶ್ನೆ: ಈ ಅಮೌಂಟ್ ಕೊಡಲಿಕ್ಕೆ ಅಥವಾ ತಗೊಳ್ಳಲಿಕ್ಕೆ ನಿಮ್ಮ ಸಮಕ್ಷಮ ಏನಾಗಿದೆ ಎಂಬ ಮಾಹಿತಿ ಇದೆಯೇ?

ಉತ್ತರ: ಹೌದು ಇದೆ, ನನ್ನ ಸಮಕ್ಷಮವೇ ನಡೆದಿದೆ ಅಂತ ಮಾಹಿತಿ ನೀಡಿದ್ದೇನೆ.

ಪ್ರಶ್ನೆ: ಯಾವ ದಿನಾಂಕದಂದು ಕಾಗದ (ಬಾಂಡ್) ಆಗಿದೆ?

ಉತ್ತರ: ಜೂನ್ 24 ರ ಸಮಯದಲ್ಲಿ ಆಗಿದೆ, ಎಕ್ಸಾಕ್ಟ್ ಡೇಟ್ ಗೊತ್ತಿಲ್ಲ ಆದರೆ ಚಿಕ್ಕೋಡಿಯಲ್ಲಿ ಆಗಿದೆ.

ಪ್ರಶ್ನೆ: ಯಾವ ವಕೀಲರ ಮುಂದೆ ಆಗಿದೆ?

ಉತ್ತರ: ಮಠದ ಅಂತ ವಕೀಲರಿದ್ದರು, ಅವರ ಮುಂದೆ ನೋಟರಿ ಮಾಡಿಸಿ ಸುಭಾಷ್ ಚಿಕ್ಕೋಡಿ ಅವರೇ ಬರೆದುಕೊಟ್ಟಿದ್ದಾರೆ.

ಪ್ರಶ್ನೆ: ಅದರಲ್ಲಿ ಏನಾದರೂ ಕರೆಕ್ಷನ್ ಆಗಿದ್ದರ ಬಗ್ಗೆ ಮಾಹಿತಿ ಇದೆಯೇ?

ಉತ್ತರ: ಟೈಪಿಂಗ್ ಮಿಸ್ಟೇಕ್ ಏನೋ ಇತ್ತು ಸರ್.

ಪ್ರಶ್ನೆ: ಆ ತಪ್ಪುಗಳ ತಿದ್ದುಪಡಿ ಬಗ್ಗೆ ನೀವೇನಾದರೂ ಸಹಿ ಮಾಡಿದ್ದೀರಾ?

ಉತ್ತರ: ಅಲ್ಲಿ ಫೋಟೋ ಹಚ್ಚಿ ಸಹಿ ಮಾಡಿದ್ದೆವು, ಇವರೇ ಸುಭಾಷ್ ಅಂತ ಗುರುತಿಸಿ ಸಹಿ ಮಾಡಿದ್ದೇವೆ. ಬೇರೆ ಏನೂ ಗೊತ್ತಿಲ್ಲ.

ಪ್ರಶ್ನೆ: ಸುಭಾಷ್ ಚಿಕ್ಕೋಡಿ ಅವರು ಈಗಾಗಲೇ ಬಂಗಾರಪ್ಪನವರ ಅಕೌಂಟ್‌ಗೆ ಹಣ ಜಮಾ ಮಾಡಿದ್ದಾರೆ ಎಂಬ ಮಾಹಿತಿ ಇದೆಯೇ?

ಉತ್ತರ: ಅದರ ಬಗ್ಗೆ ನಮಗೆ ಮಾಹಿತಿ ಇಲ್ಲ ಸರ್.

ಪ್ರಶ್ನೆ: ಬಂಗಾರಪ್ಪನವರಿಗೆ ಎಷ್ಟು ಬ್ಯಾಂಕ್ ಅಕೌಂಟ್‌ಗಳಿವೆ ಎಂಬ ಮಾಹಿತಿ ಇದೆಯೇ?

ಉತ್ತರ: ಮಾಹಿತಿ ಇಲ್ಲ ಸರ್.

ಪ್ರಶ್ನೆ: ಸುಭಾಷ್ ಅವರು ಅರ್ಬನ್ ಬ್ಯಾಂಕ್ ಮತ್ತು ಐಡಿಬಿಐ ಬ್ಯಾಂಕ್ ಮೂಲಕ ಸಾಕಷ್ಟು ಹಣ ಜಮಾ ಮಾಡಿದ್ದಾರೆ ಎಂಬುದು ಬಂಗಾರಪ್ಪನವರ ಕಡೆಯಿಂದ ನಿಮಗೆ ತಿಳಿದಿದೆಯೇ?

ಉತ್ತರ: ಬಂಗಾರಪ್ಪನವರು ಹೇಳಿದ್ರು, 8 ಲಕ್ಷದ 10 ಸಾವಿರ ಕೊಟ್ಟಿದ್ದೀನಿ, ಇನ್ನು 2.5 ಲಕ್ಷ ಕೊಡಿ ಅಂತ ಬಾಂಡ್ ಮಾಡುವಾಗ ಹೇಳಿದ್ರು. ಚೆಕ್ ಕಲೆಕ್ಷನ್ ನಂತರ ಏನಾಗಿದೆ ಎಂಬ ಮಾಹಿತಿ ಇಲ್ಲ.

ಪ್ರಶ್ನೆ: ಚೆಕ್ ಕಲೆಕ್ಷನ್ ಆದ ಮೇಲೆ ಎಂಡಾರ್ಸ್‌ಮೆಂಟ್ ಬಂದಿರುವ ಬಗ್ಗೆ ಮಾಹಿತಿ ಇದೆಯೇ?

ಉತ್ತರ: ಎಂಡಾರ್ಸ್‌ಮೆಂಟ್ ಎಂಬ ಪದದ ಬಗ್ಗೆ ನಮಗೆ ಗೊತ್ತಿಲ್ಲ. ಚೆಕ್ ಕೊಟ್ಟಿದ್ದರು, ರೊಕ್ಕ ಬಂದಿಲ್ಲ ಎಂದು ಬಂಗಾರಪ್ಪ ನಮಗೆ ಕೇಳಿದ್ದರು.

ಪ್ರಶ್ನೆ: ಸುಭಾಷ್ ಅವರನ್ನು ಮೇಲಿಂದ ಮೇಲೆ ಕೇಳಿದ್ದೇವೆ ಅಂತ ಮಾಹಿತಿ ಕೊಟ್ಟಿದ್ದೀರಾ?

ಉತ್ತರ: ಹೌದು, ಶಂಕರ್ ಟರ್ಕಿ ಮತ್ತು ನಾನು ಕೂಡಿ ಕೇಳಿದ್ದೇವೆ.

ಪ್ರಶ್ನೆ: ಯಾವ ಯಾವ ತಾರೀಖಿನಂದು ಕೇಳಿದ್ದೀರಿ?

ಉತ್ತರ: ತಾರೀಖು ಗೊತ್ತಿಲ್ಲ ಸರ್.

ಪ್ರಶ್ನೆ: ವೈಯಕ್ತಿಕವಾಗಿ ನಿಮಗೂ ಸುಭಾಷ್ ಚಿಕ್ಕೋಡಿ ಅವರಿಗೂ ಯಾವುದೇ ವ್ಯವಹಾರ ಅಥವಾ ಗೆಳೆತನ ಇಲ್ಲ ಅಲ್ಲವೇ?

ಉತ್ತರ: ಇಲ್ಲ ಸರ್, ಅವರ ಜೊತೆ ಗೆಳೆತನ ಇಲ್ಲ.

ಪ್ರಶ್ನೆ: ಈ ವ್ಯವಹಾರದ ಬಗ್ಗೆ ಮೊದಲಿನಿಂದಲೂ ಮಾಹಿತಿ ಇರಲಿಲ್ಲವೇ?

ಉತ್ತರ: ಈ ದುಡ್ಡಿನ ವ್ಯವಹಾರದ ಬಗ್ಗೆ ಮಾಹಿತಿ ಇದೆ. ಮೊದಲಿನದ್ದೇನೂ ಗೊತ್ತಿಲ್ಲ.

ಪ್ರಶ್ನೆ: ಸುಭಾಷ್ ಅವರು 4 ಲಕ್ಷ ರೂಪಾಯಿಗಳನ್ನು ಬಂಗಾರಪ್ಪನವರಿಂದ ಪಡೆದು ಅಕೌಂಟ್ ಮೂಲಕ ವಾಪಸ್ ಕೊಟ್ಟಿದ್ದಾರೆ ಎಂಬುದು ಗೊತ್ತೇ?

ಉತ್ತರ: ಇಲ್ಲ, ಅವರು ಕೊಟ್ಟಿಲ್ಲ.

ಪ್ರಶ್ನೆ: ಬ್ಯಾಂಕ್ ವ್ಯವಹಾರಗಳೆಲ್ಲಾ ರೆಕಾರ್ಡ್ ಆಗಿರುತ್ತವೆ, ಅದರಂತೆ ಸುಭಾಷ್ ಅವರು ಹಣ ಮುಟ್ಟಿಸಿದ್ದಾರೆ ಆದರೂ ನೀವು ಬಂಗಾರಪ್ಪನ ಮಾತು ಕೇಳಿ ಸುಳ್ಳು ಹೇಳ್ತಾ ಇದ್ದೀರಿ ಅಲ್ಲವೇ?

ಉತ್ತರ: ಸುಳ್ಳು ಹೇಳ್ತಾ ಇಲ್ಲ ಸರ್, ಅವರು ಮುಟ್ಟಿಸಿದ್ದರೆ ಬಾಂಡ್ ಯಾಕೆ ಮಾಡಿಕೊಡ್ತಿದ್ರು?

ಪ್ರಶ್ನೆ: 2017 ರ ನಂತರ 20 ಸಾವಿರಕ್ಕಿಂತ ಹೆಚ್ಚು ಹಣದ ವ್ಯವಹಾರ ಅಕೌಂಟ್ ಮೂಲಕವೇ ಆಗಬೇಕು ಎಂಬ ನಿಯಮವಿದೆ ಎಂಬುದು ಗೊತ್ತೇ?

ಉತ್ತರ: ಇವತ್ತಿನ ದಿನ 5-10 ಲಕ್ಷ ಕ್ಯಾಶ್ ಕೂಡ ಕೊಡ್ತಾರೆ ಸರ್, ಅಕೌಂಟ್ ಮೂಲಕವೇ ಆಗಬೇಕು ಅಂತೇನೂ ಇಲ್ಲ. ನಾವೂ ಕಾಂಟ್ರಾಕ್ಟ್ ಮಾಡ್ತೀವಿ, ಗ್ಯಾಂಗ್‌ನವರಿಗೆ 2-2 ಲಕ್ಷ ಕೈಯಲ್ಲೇ ಕೊಡ್ತೀವಿ.

ಪ್ರಶ್ನೆ: ನೀವು ಮುದ್ದಾಂ ಸುಳ್ಳು ಹೇಳ್ತಾ ಇದ್ದೀರಿ. 13-09-2024 ರಂದು ಈಗಾಗಲೇ ಬಂಗಾರಪ್ಪ ಅವರು ಸುಭಾಷ್ ಅವರಿಗೆ ನೋಟಿಸ್ ಕೊಟ್ಟಿದ್ದಾರೆ ಎಂಬ ಮಾಹಿತಿ ಇದೆಯೇ?

ಉತ್ತರ: ಇಲ್ಲ ಸರ್, ದುಡ್ಡಿನ ವ್ಯವಹಾರದ ಬಗ್ಗೆ ಅಷ್ಟೇ ನಮಗೆ ಗೊತ್ತು. ಸಿವಿಲ್ ಕೇಸ್ ಬಗ್ಗೆ ಮಾಹಿತಿ ಇಲ್ಲ.

ಪ್ರಶ್ನೆ: ಈ ಪ್ರಕರಣದೊಳಗೆ ಯಾವ ಚೆಕ್ಕಿನ ನಂಬರ್‌ನ ಚೆಕ್ ಇದೆ ಅಂತ ತಮಗೇನಾದರೂ ಮಾಹಿತಿ ಇದೆಯಾ?

ಉತ್ತರ: ಇಲ್ಲ.

ಪ್ರಶ್ನೆ: ಈ ಪ್ರಕರಣದೊಳಗೆ ಯಾವ ಚೆಕ್ ನಂಬರ್ ಚೆಕ್ ಅದ ಅಂತ ತಮಗೇನಾದ್ರೂ ಮಾಹಿತಿ ಅದಾ?

ಉತ್ತರ: ಇಲ್ಲ.

ಪ್ರಶ್ನೆ: ಮೆಮೋ ಎಂಡೋರ್ಸ್‌ಮೆಂಟ್ ಬಂದದ್ದು ಏನೆಂದು ಬಂದಿದೆ ಎನ್ನುವ ಮಾಹಿತಿ ಇದೆಯೇ?

ಉತ್ತರ: ಇಲ್ಲ ಸರ್.

ಪ್ರಶ್ನೆ: ಅವರು ಏನಾದರೂ ನೋಟಿಸ್ ಕೊಟ್ಟಿದ್ದಾರೆ ಎನ್ನುವ ಬಗ್ಗೆ ತಮಗೆ ಮಾಹಿತಿ ಇದೆಯೇ?

ಉತ್ತರ: ಬಂಗಾರಪ್ಪನವರು ಕೇಸ್ ಮಾಡಿದ್ದಾರೆ ಎಂಬುದು ಗೊತ್ತಿದೆ, ನೋಟಿಸ್ ಬಗ್ಗೆ ಗೊತ್ತಿಲ್ಲ.

ಪ್ರಶ್ನೆ: ತಾವು ಏನು ಕರಾರು ಪತ್ರ ಎಂದು ಹೇಳುತ್ತೀರಲ್ಲ, ಅದರ ಮೇಲೆ ತಿದ್ದುಪಡಿಗಳ ಸಂಖ್ಯೆ ಮೊದಲು ನಿಲ್ ಅಂತ ಇದೆ. ಅದಾದ ನಂತರ ಇದರಲ್ಲಿ ತಿದ್ದುಪಡಿಗಳನ್ನು ಮಾಡಿದ್ದಾರೆ. ಈ ತಿದ್ದುಪಡಿಗಳ ಬಗ್ಗೆ ನಿಮ್ಮ ಯಾವುದೇ ಸಹಿ ಪಡೆದುಕೊಂಡಿಲ್ಲ ಅಲ್ಲವೇ?

ಉತ್ತರ: ಹೌದು, ಇಲ್ಲ ಇಲ್ಲ.

ಪ್ರಶ್ನೆ: ಅದರ ಬಗ್ಗೆ... ಉತ್ತರ: ಅದು ಟೈಪಿಂಗ್ ಮಿಸ್ಟೇಕ್ ಆಗಿದೆ ಸರ್.

ಪ್ರಶ್ನೆ: ಈ ತಿದ್ದುಪಡಿಗಳ ಬಗ್ಗೆ ಬಂಗಾರಪ್ಪನವರ ಸಹಿಯೂ ಇಲ್ಲ. ನೋಟರಿಯವರೂ ಈ ಕರಾರು ಪತ್ರದ ಮೇಲೆ ಸಹಿ ಮಾಡಿಲ್ಲ. ಈ ಕರಾರು ಪತ್ರವನ್ನು ಸುಳ್ಳಾಗಿ ತಯಾರಿಸಲಾಗಿದೆ ಅಲ್ಲವೇ?

ಉತ್ತರ: ಇಲ್ಲ ಸರ್, ಕೋರ್ಟ್‌ನವರ ಮುಂದೆ ಮಾಡಿದ್ದಾರೆ, ಸುಳ್ಳು ಮಾಡಲು ಹೇಗೆ ಸಾಧ್ಯ?

ಪ್ರಶ್ನೆ: ಬಂಗಾರಪ್ಪನವರು ಈ ನೋಟರಿ ವಕೀಲರಿಂದ ಎಲ್ಲ ತಿದ್ದುಪಡಿಗಳನ್ನು ಮಾಡಿಸಿದ್ದಾರೆ, ಆದ್ದರಿಂದ ಈ ಕರಾರು ಪತ್ರಕ್ಕೆ ಕಾಯ್ದೆಯೊಳಗೆ ಮಾನ್ಯತೆ ಇಲ್ಲ.

ಉತ್ತರ: ಅದು ಕರೆಕ್ಟ್ ಆಗಿದೆ, ನಾವು ಮಾಡಿಸಿದ್ದೇವೆ, ಸಾಕ್ಷಿಗಳ ಮುಂದೆ ಎಲ್ಲರೂ ಇದ್ದರು.

ಪ್ರಶ್ನೆ: ಕೇವಲ ನಾಲ್ಕು ಲಕ್ಷ ರೂಪಾಯಿಗಳನ್ನು ಮಾತ್ರ ಆರೋಪಿ ಸುಭಾಷ್ ಅವರು ಬಂಗಾರಪ್ಪನವರಿಂದ ಪಡೆದುಕೊಂಡಿದ್ದರು. ಆ ಹಣವನ್ನು ಈಗಾಗಲೇ ಮರಳಿಸಿದ್ದರೂ ಸಹ ತಾವು ಸುಳ್ಳು ಕರಾರು ಪತ್ರ ಮತ್ತು ಚೆಕ್ ಅನ್ನು ದುರುಪಯೋಗಪಡಿಸಿಕೊಂಡು ಕೇಸ್ ಹಾಕಿದ್ದೀರಿ. ಅದಕ್ಕೆ ಪೂರಕವಾಗಿ ತಾವು ಸಾಕ್ಷಿ ಹೇಳುತ್ತಿದ್ದೀರಿ, ಇದೆಲ್ಲ ಸುಳ್ಳು ಅಲ್ಲವೇ?

ಉತ್ತರ: ಇದೆಲ್ಲ ಸುಳ್ಳು ಸರ್, ವ್ಯವಹಾರದ ಹಣ ಕೊಟ್ಟಿದ್ದು ಎಲ್ಲವೂ ಕರೆಕ್ಟ್ ಆಗಿದೆ.

ಪ್ರಶ್ನೆ: ಶಂಕರ್ ತರ್ಕಿಯವರು 2020 ರಲ್ಲಿ ಸುಭಾಷ್ ಅವರಿಗೆ ವಾಹನ ಸಾಲ ಕೊಡಿಸಿದ್ದರು. ಆ ಸಮಯದಲ್ಲಿ ಅವರು ಎರಡು ಚೆಕ್‌ಗಳಿಗೆ ಸಹಿ ಮಾಡಿಸಿಕೊಂಡಿದ್ದರು, ಇದರ ಬಗ್ಗೆ ತಮಗೆ ಮಾಹಿತಿ ಇದೆಯೇ?

ಉತ್ತರ: ಅದರ ಬಗ್ಗೆ ಗೊತ್ತಿಲ್ಲ, ಕೇವಲ ವ್ಯವಹಾರದ ಬಗ್ಗೆ ಗೊತ್ತು.

ಪ್ರಶ್ನೆ: ಶಂಕರ್ ತರ್ಕಿಯವರು ಆ ಚೆಕ್ ಅನ್ನು ಬಂಗಾರಪ್ಪನವರಿಗೆ ಕೊಟ್ಟು ಸುಭಾಷ್ ಅವರ ಮೇಲೆ ಕೇಸ್ ಹಾಕಿಸಿದ್ದಾರೆ, ಇದರ ಬಗ್ಗೆ ತಮಗೆ ಏನಾದರೂ ಮಾಹಿತಿ ಇದೆಯೇ?

ಉತ್ತರ: ಇಲ್ಲ, ನೀವು ಸುಳ್ಳು ಹೇಳುತ್ತಿದ್ದೀರಿ.

ಪ್ರಶ್ನೆ: ಈ ಚೆಕ್ ಬಗ್ಗೆ ತಮಗೆ ಮಾಹಿತಿ ಇಲ್ಲ ಮತ್ತು ಈ ಸುಳ್ಳು ಕರಾರು ಪತ್ರದ ಪ್ರಕಾರ ತಾವು ಸಾಕ್ಷಿ ಹೇಳುತ್ತಿದ್ದೀರಿ ಅಲ್ಲವೇ?

ಉತ್ತರ: ಮಾಹಿತಿ ಇದೆ, ಬಾಂಡ್ ಮಾಡಿಸಲಾಗಿದೆ, ಹಣದ ವ್ಯವಹಾರದ ಬಗ್ಗೆಯೂ ಮಾಹಿತಿ ಇದೆ.

ಪ್ರಶ್ನೆ: ತಾವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದು ಕೋರ್ಟ್ ಮುಂದೆ ಹೇಳುತ್ತೇವೆ. ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ತಾವು ಯಾವುದೇ ಮಾಹಿತಿ ನೀಡಿಲ್ಲ ಅಲ್ಲವೇ?

ಉತ್ತರ: ಆ ಶಬ್ದಗಳ ಬಗ್ಗೆ ನಮಗೆ ಮಾಹಿತಿ ಇಲ್ಲ, ಅದಕ್ಕೆ ಗೊತ್ತಾಗುತ್ತಿಲ್ಲ.

ಪ್ರಶ್ನೆ: ತಮಗೆ ಚೆಕ್ ಮತ್ತು ವ್ಯವಹಾರದ ಬಗ್ಗೆ ಏನೂ ಗೊತ್ತಿಲ್ಲ, ಬಂಗಾರಪ್ಪ ಮತ್ತು ಶಂಕರ್ ಅವರ ಸ್ನೇಹಿತರಾದ ಕಾರಣ ತಾವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಅಲ್ಲವೇ?

ಉತ್ತರ: ಅವರು ನನ್ನ ಫ್ರೆಂಡ್ಸ್ ಅಲ್ಲ, ನಾವು ವ್ಯವಹಾರದ ಸಂಬಂಧದವರು, ಹಣದ ವ್ಯವಹಾರದಲ್ಲಿ ಜೊತೆಗಿದ್ದೇವೆ.

ನಿ.ಪಿ-3 ರಲ್ಲಿ ತಿದ್ದುಪಡಿಯಾದ ಬಗ್ಗೆ ನನ್ನ ಸಹಿ ಪಡೆದಿಲ್ಲ.

**ಮರುವಿಚಾರಣೆ ಇಲ್ಲ**

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ